Under Section 194(2) of the Karnataka Land Revenue Act, 1964.

MR. SPEAKER.—The Notifications are laid.

MATTER UNDER RULE 312.

re : Non-payment of increments, T. A. and D. A. to Village Accountants.

SRI M.V. RAJASEKHARAN (Uttarahalli).—Sir, I raise a matter under Rule 312 regarding non-payment of increments, T. A. and D. A. to Village Accountants.

SRI B. BASAVALINGAPPA (Minister for Revenue).—Sir, I wish to make the following statement:

As per Rule 6 of the Karnataka General Services, Village Accountants (Recruitment) Rules 1970, since repealed, as there is a corresponding provision in the Karnataka Civil Services (Service and Kannada Language Examination) Rules, 1974 as amended *vide* Notification No. D P A R 16 S S R 76 dated 7th July 1976, the Village Accountants recruited under the Karnataka Village Accountants Recruitment Rules 1970 are expected to be on probation for a period of two years and during the period of probation they are required to pass the Kannada Language Examinations and the departmental examinations in Accounts (Lower) and Revenue (Lower). The probationery period will be declared as having been completed satisfactorily only after passing of the prescribed examinations by them and if their work is found to be satisfactory. Unless this condition is fulfilled, they will not be entitled either for confirmation or for earning increment.

The passing of departmental examinations is a must for the candidates selected for any cadre in the State Government Service. This is very essential for efficient working of the departments concerned. Hence, passing of the departmental examinations by the Village Accountants cannot be dispensed with. The Village Accountants are therefore required to pass the prescribed examinations before they become eligible for earning increments.

As regards payment of T.A. and D.A. each Village Accountant is expected to be incharge of one Village or group of Villages. They are not being paid any T.A. or D.A. at present. Since some of the Village Accountants are required to visit taluk headquarters and to pay visits to other Villages for discharging their duties, the payment of some T.A. seems to be necessary. The question of payment of fixed

T.A. at 15-00 p.m. is now under consideration of Government. This was referred to the Finance Department and the said Department has suggested that a decision on the report of Official Pay Committee may be awaited. The matter will be pursued with the Finance Department.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಇಲಾಖೆ ಪರೀಕ್ಷೆಗಳನ್ನು ಪಾಸ್ ಮಾಡುವವರೆಗೆ ಇಂಕ್ರಿಮೆಂಟನ್ನು ಕೊಡುವುದಕ್ಕಾಗುವುದಿಲ್ಲ ಎಂದು; ಅದನ್ನು ನಾನು ಒಪ್ಪುತ್ತೇನೆ ಆದರೆ ನಮ್ಮ ರಾಜ್ಯದಲ್ಲಿ ೧೦-೧೫ ಸಾವಿರ ಪಂಚಾಯಿತಿಗಳು ಇವೆ ಮತ್ತು ಅಲ್ಲಿ ಕೆಲಸ ಮಾಡತಕ್ಕ ಯಾವ ವಿಲೇಜು ಅಕೌಂಟೆಂಟ್‌ಗಳೂ ಇದುವರೆಗೆ ಇಲಾಖಾ ಪರೀಕ್ಷೆಯನ್ನು ಪಾಸ್ ಮಾಡಿಲ್ಲವೆ? ಪಾಸ್ ಮಾಡಿದ್ದರೆ ಅವರುಗಳಿಗೆ ಇಂಕ್ರಿಮೆಂಟನ್ನು ಕೊಟ್ಟಿದ್ದೀರಾ? ಎರಡನೆಯದಾಗಿ, ಟಿ.ಎ. ಮತ್ತು ಡಿ.ಎ. ವಿಚಾರವಾಗಿ ಹೇಳುವುದಾದರೆ, ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ೧೫ ರೂಪಾಯಿ ಫಿಕ್ಸೆಡ್ ಟಿ.ಎ. ಮತ್ತು ಡಿ.ಎ. ಕೊಡಬೇಕೆಂದು ಪರ್ಮಾಲೋಚನೆ ಮಾಡುತ್ತಿದ್ದಾರೆಂದು ತಿಳಿಸಿದಿರಿ. ಅವರುಗಳು ಈ ೬ ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಕೂಡ ಇದುವರೆಗೆ ಏಕೆ ತೀರ್ಮಾನ ಮಾಡಲಿಲ್ಲ ಮತ್ತು ಆ ಫಿಕ್ಸೆಡ್ ಟಿ.ಎ. ಮತ್ತು ಡಿ.ಎ. ಸಾಕಾಗುತ್ತದೆಯೇ? ಒಬ್ಬ ವಿಲೇಜ್ ಅಕೌಂಟೆಂಟ್ ತಿಂಗಳಲ್ಲಿ ೪-೫ ಬಾರಿ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಹೋಗಬೇಕಾಗುತ್ತದೆ, ಮತ್ತು ಅಲ್ಲಿ ಕೆಲಸಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಈಗಾಗಲೇ ವಿಲೇಜ್ ಲೆವಲ್ ವರ್ಕರ್ಸ್‌ಗೆ ಎಲ್ಲಾ ರೀತಿಯ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದೀರಿ, ಆದರೆ ಇವರಿಗೆ ಏಕೆ ಮಾಡಿಕೊಡಲಿಲ್ಲ? ಮೂರನೆಯದಾಗಿ, ಕಂಟಿಂಜೆನ್ಸಿಗೆ ಒಂದು ಕಾಸನ್ನೂ ಕೂಡ ಕೊಟ್ಟಿಲ್ಲ; ಈ ಬಾಬ್ತು ಅವರಿಗೆ ವರ್ಷದಲ್ಲಿ ೧೦೦-೨೦೦ ರೂಪಾಯಿ ಖರ್ಚಾಗುತ್ತದೆ. ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಗೊತ್ತಿರುವ ಹಾಗೆ, ಫಾರಂ ನಂ. ೧ರಿಂದ ೧೨ರ ವರೆಗೆ ಅವರೇ ಭರ್ತಿ ಮಾಡಬೇಕು. ಕಾತೆ, ಪಹಣಿ ಎಲ್ಲ ಬರೆಯಬೇಕು. ಇದಕ್ಕೆಲ್ಲ ಒಂದು ಕಾಸನ್ನು ಸರ್ಕಾರದಿಂದ ಕೊಡುತ್ತಿಲ್ಲ. ಇದನ್ನು ಕೊಡುವುದಕ್ಕೆ ಸರ್ಕಾರದವರು ವಿಚಾರ ಮಾಡುತ್ತೀರಾ? ವಿಚಾರ ಮಾಡಿದರೆ ಯಾವಾಗ ಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ನಾನು ಹೇಳಿದ ಮಾತನ್ನು ಒಪ್ಪುತ್ತಾರೆಂದು ಕಾಣುತ್ತದೆ. ಅದಕ್ಷತೆ ವಿಚಾರದಲ್ಲಿ ನಾವು ನೀವು ಬಹಳ ಜಾಗರೂಕರಾಗಿರಬೇಕು; ಮತ್ತು ಅದರ ಬಗೆ ತೀವ್ರವಾಗಿ ಗಮನ ಕೊಡಬೇಕು. ಆ ಅಧಿಕಾರಿಗಳು ಎಲ್ಲ ಮಟ್ಟದಲ್ಲಿಯೂ ಹೇಗೆ ಕೆಲಸ ಮಾಡಬೇಕೆಂದು ನಾವು ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ಅವರೆಲ್ಲರೂ ಕೆಲಸ ಮಾಡಬೇಕೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಯಾರ್ಯಾರು ಆ ಪ್ರಕಾರ ಮಾಡುತ್ತಿಲ್ಲ ಎಂಬ ಬಗ್ಗೆ ತೀವ್ರ ಗಮನಕೊಡಬೇಕಾಗಿದೆ. ಈ ಸಂದರ್ಭದಲ್ಲಿ, ಅವರು ಇಲಾಖಾ ಪರೀಕ್ಷೆಗಳನ್ನು ಪಾಸ್ ಮಾಡಿರಲಿ ಮಾಡದೇ ಇರಲಿ ಅವರಿಗೆ ವಯಸ್ಸಾಗಿರುವುದರಿಂದ ಬಡ್ತಿ ಕೊಡಬೇಕೆಂದು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ನಾನಂ ಹಾಗೆ ಕೊಡಬೇಕೆಂದು ಹೇಳಲಿಲ್ಲ,

ಶ್ರೀ ಬಿ. ಬಸವಲಿಂಗಪ್ಪ.—ನೀವು ಬಡ್ತಿ ಕೊಡಲೇ ಬೇಕೆಂದರೆ, ನಾನು ಆ ವಾದಕ್ಕೆ ಒಪ್ಪುವುದಿಲ್ಲ. ಅವರು ಸರಿಯಾಗಿ ಕೆಲಸ ಮಾಡಿದರೆ ಅವರ ಯೋಗ್ಯತೆ ಮತ್ತು ದಕ್ಷತೆ ನೋಡಿ ಬಡ್ತಿ ಕೊಡುತ್ತೇವೆ. ಇಲ್ಲದಿದ್ದರೆ ವಯಸ್ಸನ್ನು ನೋಡಿ ಬಡ್ತಿ ಕೊಡುವುದಕ್ಕಾಗುವುದಿಲ್ಲ. ಇನ್ನು ಟಿ.ಎ. ಮತ್ತು ಡಿ.ಎ. ವಿಚಾರದಲ್ಲಿ ಹೇಳುವುದಾದರೆ, ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮಾಡಿಕೊಂಡು ಇರಬೇಕಾಗುತ್ತದೆ; ಸುತ್ತಾಡುವುದಕ್ಕೆ ಟಿ.ಎ., ಡಿ.ಎ. ಕೊಡತಕ್ಕ ಆವಶ್ಯಕತೆ ಇಲ್ಲವೆಂದು ನನ್ನ ಭಾವನೆ. ತಾಲ್ಲೂಕು ಆಫೀಸಿಗೆ ಬರಬೇಕಾದರೆ ಆ ಬಗ್ಗೆ ಪರಿಶೀಲನೆ ಮಾಡಿ ನೋಡೋಣ. ಅವರುಗಳು ಯಾರೂ ಹಳ್ಳಿಗಾಡಿನಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ; ಎಲ್ಲಿಯೋ ಮಜಾಮಾಡಿಕೊಂಡು ಇರುತ್ತಾರೆ. ಆದಕ್ಕೋಸ್ಕರ ಯಾದರೂ ನಿರ್ಬಂಧವನ್ನು ಹಾಕಲೇಬೇಕಾಗುತ್ತದೆ. ಈ ವಿಚಾರ ನಿಮಗೂ ಗೊತ್ತು ಮತ್ತು ನನಗೂ ಗೊತ್ತು. ಆದ್ದರಿಂದ ಈ ಬಗ್ಗೆ ಹೆಚ್ಚು ವಿವರಣೆ ಬೇಕಾಗಿಲ್ಲವೆಂದು ಕಾಣುತ್ತದೆ. ಈಗ ಇವರ ಕೆಲಸವನ್ನು ನೋಡಿದರೆ ಕಂದಾಯ ಮಂತ್ರಿಯಾದ ನನಗೆ ವ್ಯಥೆಯಾಗುತ್ತದೆ. ಹಿಂದಿನ ಕಾಲದಲ್ಲಿ ಶ್ಯಾನುಬೋಗರುಗಳಿದ್ದರು, ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಆದರೆ ಅವರನ್ನು ತೆಗೆದು ಹಾಕಬೇಕೆಂಬುವವರಲ್ಲಿ ನಾನು ಒಬ್ಬ. ಈಗ ಅವರನ್ನು ತೆಗೆದು ಹಾಕಿದ್ದೇವೆ. ಈಗ ಹೊಸಡಾಗಿ

ಇವರುಗಳು ಅಧಿಕಾರಿಗಳಾಗಿದ್ದಾರೆ. ಅವರು ಪಂಚೆ ಉಡುತ್ತಿದ್ದರು, ಇವರು ಪ್ಯಾಂಟ್ ಹಾಕಿ ಕೊಂಡು ಓಡಾಡುತ್ತಾರೆ. ಕೆಲಸ ಮಾತ್ರ ನಿರೀಕ್ಷಿಸಿದಷ್ಟು ಆಗುತ್ತಿಲ್ಲ. ಈಗ ಎಲ್ಲ ವಿಲೇಜ್ ಆಕೌಂಟೆಂಟುಗಳು ಸೇರಿ ಒಂದು ಸಂಘವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಸರ್ಕಾರಕ್ಕೆ ರೆಪ್ರಸೆಂಟೇಷನ್ ಕೊಡತಕ್ಕ ಪ್ರವೃತ್ತಿ ಬೆಳೆಯುವಂತೆ ಕಾಣುತ್ತಿದೆ. ಅದಕ್ಕೆಲ್ಲ ಬೆಂಬಲ ಕೊಟ್ಟು ಅದಕ್ಷತೆ ಬಗ್ಗೆ ಗಮನ ಕೊಡದೆ ಕನಿಕರ ಭಾವನೆಯನ್ನು ಇಟ್ಟುಕೊಂಡರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಟಿ.ಎ. ಮತ್ತು ಡಿ.ಎ. ವಿಚಾರದಲ್ಲಿ ಪರಿಶೀಲನೆ ಮಾಡಲಾಗುವುದು. ತಾಲ್ಲೂಕು ಆಫೀಸಿಗೆ ಕೆಲಸವಿದ್ದು ಹೋಗುವಾಗ ಕೊಡಬಹುದೇ ವಿನಹ ಹಳ್ಳಿಗಾಡಿನಲ್ಲಿ ತಿರುಗಾಡುವುದಕ್ಕೆ ಕೊಡುವುದು ಸರಿಯಲ್ಲ. ವೆಹಿಕಲ್ ಕೊಡುವ ಬಗ್ಗೆಯೂ ಪರಿಶೀಲನೆ ಮಾಡುತ್ತಿದ್ದೇವೆ. ಕಂಟೆಂಜೆನ್ಸಿ ವಿಚಾರವಾಗಿ ಪೇಪರ್ ಕೊಡಲಿಲ್ಲ, ಪೆನ್ ಕೊಡಲಿಲ್ಲ, ಮಸಿ ಕೊಡಲಿಲ್ಲ ಎಂದು ಯಾರು ಮಾನ್ಯ ಸದಸ್ಯರಿಗೆ ಹೇಳಿದರೋ ಏಕೆ ಹೇಳಿದರೋ ಗೊತ್ತಿಲ್ಲ. ಆದನ್ನೆಲ್ಲ ಸರ್ಕಾರದವರು ನೋಡಿಕೊಳ್ಳುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ದೇವರಾಜ ಅರಸುರವರು ಮೊನ್ನೆ ತಮ್ಮ ಭಾಷಣದ ಜಮಾಬಂದಿ ಮಾಡಿಸುತ್ತೇವೆಂದು ಹೇಳಿದ್ದಾರೆ. ಆ ಕಾರಣದಿಂದ ಶ್ಯಾನುಭೋಗರುಗಳನ್ನು ಪುನ: ನೇಮಕ ಮಾಡುವ ಆಲೋಚನೆ ಇದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ಪುನಃ ನೇಮಿಸುವ ವಿಚಾರ ಇಲ್ಲ. ಅವರನ್ನು ವಜಾ ಮಾಡುವಾಗ ಏನು ಭಾವನೆ ಇತ್ತೋ ಅದು ಈಗ ವಿಪರೀತ ಭಾವನೆಯಾಗಿದೆ ಎಂದು ಹೇಳಿದ್ದೇನೆ.

ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಮಂತ್ರಿಗಳು ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೆ ಇನ್‌ಕ್ರಿಮೆಂಟ್ಸ್ ಕೊಡುವುದಿಲ್ಲವೆಂದು ಹೇಳಿದರು, ಅದನ್ನು ನಾನು ಒಪ್ಪುತ್ತೇನೆ. ನಾವು ಕೂಡ ಕೊಡಿ ಎಂದು ಹೇಳುವುದಿಲ್ಲ. ಏಕೆಂದರೆ ಆ ಕಾನೂನನ್ನು ನಾವೇ ಮಾಡಿರುವುದು. ಆದರೆ ೧೦-೧೫ ಸಾವಿರ ಮಂದಿ ವಿಲೇಜ್ ಆಕೌಂಟೆಂಟುಗಳು ಏನಿದ್ದಾರೆ ಅವರು ಮೂರು ಇದುವರೆಗೆ ಇಲಾಖಾ ಪರೀಕ್ಷೆಗಳನ್ನು ಪಾಸ್ ಮಾಡಿಲ್ಲವೆ? ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಎರಡನೆಯದಾಗಿ ಹಳ್ಳಿಯ ಮಟ್ಟದಲ್ಲಿ ವಿಲೇಜ್ ಆಕೌಂಟೆಂಟುಗಳ ಪಾತ್ರ ಬಹಳ ಮಹತ್ವರವಾದುದು. ರೈತನು ಎಲ್ಲ ವಿಚಾರಗಳಿಗೂ ವಿಲೇಜ್ ಆಕೌಂಟೆಂಟನ್ನೇ ಅವಲಂಬಿಸಬೇಕಾಗುತ್ತದೆ. ಅವನಿಗೆ ಏನು ಅಂಕಿ ಅಂಶಗಳು ಬೇಕಾದರೂ ಮೊಟ್ಟಮೊದಲು ಕೇಳತಕ್ಕುದ್ದು ವಿಲೇಜ್ ಆಕೌಂಟೆಂಟನ್ನೇ. ಆದ್ದರಿಂದ ಅವರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅವರ ಪರಿಸ್ಥಿತಿ ಬಹಳ ಬಿಗಡಾಯಿಸುತ್ತದೆಂದು ತಿಳಿದುಕೊಂಡಿದ್ದೇನೆ. ಟಿ.ಎ. ಮತ್ತು ಡಿ.ಎ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟರೆ ಕೊಡಬಹುದು, ಬಿಟ್ಟರೆ ಬಿಡಬಹುದೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳು, ಮಂತ್ರಿಗಳೇ ಸಾವಿರಾರು ರೂಪಾಯಿ ಟಿ.ಎ., ಡಿ.ಎ. ಯನ್ನು ಎಲ್ಲೂ ಹೋಗದೆ ಕ್ಲೈಮ್ ಮಾಡಿರತಕ್ಕ ವಿಚಾರವನ್ನು ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಪಾಪ! ಆ ಬಡ ಪ್ರಾಣಿ ತಿಂಗಳಲ್ಲಿ ೪-೫ ಬಾರಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕು, ಹಣ ಕಟ್ಟಲು ಹೋಗಬೇಕು, ರೈತನಿಗೆ ಸರ್ಕಾರದಿಂದ ಸಾಲ ಕೊಡದಿದ್ದರೂ ಓಡಾಡಬೇಕು. ಪ್ರಾಪರ್ಟಿ ಅಟಾಚ್ ಮಾಡುವಾಗಲೂ ಹೋಗಬೇಕು. ಹೀಗೆ ಇಷ್ಟೆಲ್ಲಾ ಕರ್ತವ್ಯಗಳನ್ನು ಪಾಲನೆ ಮಾಡ ತಕ್ಕವರಿಗೆ ಕೇವಲ ೫೧ ರೂಪಾಯಿಗಳನ್ನು ಕೊಟ್ಟರೆ ಕೊಡಬಹುದು. ಬಿಟ್ಟರೆ ಬಿಡ ಬಹುದೆಂದು ಆ ಬಡ ಪ್ರಾಣಿಯ ಮೇಲೆ ಅಸ್ತ್ರಪ್ರಯೋಗ ಮಾಡಿದರೆ ಆತ ಬದುಕುವುದಾದರೂ ಹೇಗೆ? ಆದ್ದರಿಂದ ಅವರಿಗೆ ಸಾಕಷ್ಟು ಟಿ.ಎ. ಮತ್ತು ಡಿ.ಎ. ಯನ್ನು ಕೊಟ್ಟು ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು, ವಿಲೇಜ್ ಆಕೌಂಟೆಂಟುಗಳು ಹಳ್ಳಿಯಲ್ಲಿ ವಾಸ ಮಾಡುವುದಿಲ್ಲವೆಂದು ಹೇಳಿದರು. ಆದರೆ ಅವರಿಗೆ ಅಲ್ಲಿ ವಾಸಕ್ಕೆ ಮನೆ ಇರದಿದ್ದರೆ ಅಲ್ಲಿ ಹೇಗೆ ತಾನೇ ಇರುವುದಕ್ಕೆ ಸಾಧ್ಯ? ಅವನು ನಿಜವಾಗಿಯೂ ಬೇರೆ ಕಡೆ ಮನೆಗಳು ಸಿಗುವ ಸ್ಥಳಕ್ಕೆ ಹೋಗುತ್ತಾನೆ. ಉದಾಹರಣೆಗೆ ಕನಕಪುರ ತಾಲ್ಲೂಕಿನ ಬ್ಯ ಅಕೌಂಟೆಂಟ್ ೬-೭ಮೈಲಿ ದೂರದ ಊರಿನಲ್ಲಿ ವಾಸಿಸುತ್ತಿದ್ದಾನೆ. ಈ ಬಗ್ಗೆ ಸರ್ಕಾರದವರು ಎಷ್ಟು ಗಮನ ಕೊಡುತ್ತಿದ್ದಾರೆ? ಸರ್ಕಾರದ ದೃಷ್ಟಿಯಲ್ಲಿ ವಿಲೇಜ್ ಆಕೌಂಟೆಂಟ್ ಬಹಳ ಮುಖ್ಯವಾದ ಮನುಷ್ಯ ಅವನಿಗೆ ಎಲ್ಲರೀತಿಯ ಸೌಕರ್ಯಗಳನ್ನು ಒದಗಿಸಿ ಕೊಡದಿದ್ದರೆ ನಿಮ್ಮ ಎಲ್ಲ ಲೆಕ್ಕ ಪತ್ರಗಳ ವಿಪರ ಗಳು ತಲೆಕೆಳಗಾಗುತ್ತವೆ. ಆದ್ದರಿಂದ ದಯವಿಟ್ಟು ಅವನನ್ನು ಸರಿಯಾಗಿ ನೋಡಿಕೊಳ್ಳಿ ಎಂದು ಸಲಹೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಜಶೇಖರನ್‌ರವರು ಒಳ್ಳೆಯ ರೀತಿಯಿಂದ ಅವರ ಬಗ್ಗೆ ವಾದ ಮಾಡಿದ್ದಾರೆ. ಆ ವಿಷಯಗಳು ನಮಗೆ ಗೊತ್ತಿಲ್ಲವೆಂದು ಅಲ್ಲ. ನಮ್ಮಲ್ಲಿ ಅಪರಿಗಿಂತ ಬಡ

ಪ್ರಾಣಿಗಳು ಕೇವಲ ಒಂದು ರೂಪಾಯಿ ಸಂಪಾದನೆವುಳ ವರು ಲೇಕಪ ೪೦ರಷ್ಟು ಮುಂದಿ ಇದ್ದಾರೆ, ಅವರ ಕಡೆ ಗಮನ ಕೊಡಿ. ಇವರಿಗೆ ೩೦ ರೂಪಾಯಿ ಸಂಬಳ ಸಿಗುತ್ತದೆ, ಆದರೆ ೩೦ ರೂಪಾಯಿ ಕೂಡ ಸಿಗದೆ ಇರುವವರು ಇದ್ದಾರೆ. ಅವರ ಬಗ್ಗೆ ನಿಮಗೆ ಕನಿಕರ ಇಲ್ಲವೆ? ಅವರ ಕಡೆ ಎಷ್ಟು ಗಮನ ಕೊಡಬೇಕೋ, ಎಷ್ಟು ಅನುಕೂಲಗಳನ್ನು ಮಾಡಿಕೊಡಬೇಕೋ ಅಷ್ಟನ್ನು ಮಾಡಿಕೊಡುತ್ತೇವೆ. ಈಗಾಗಲೇ ಅವರಿಗೆ ಮನೆ ಕಟ್ಟಿಕೊಡಬೇಕೆಂದು ತೀರ್ಮಾನಿಸಿದ್ದೇವೆ. ಆ ಯೋಜನೆ ಕೂಡ ತಯಾರು ಆಗುತ್ತಿದೆ ಆ ಬಗ್ಗೆ ಒಂದು ಮೀಟಿಂಗನ್ನು ಕೂಡ ಕರೆದಿದ್ದೇವೆ, ಫೈನಲ್ ಮಾಡುತ್ತೇವೆ. ಒಟ್ಟಿನಲ್ಲಿ, ಒಂದು ತೀರ್ಮಾನ ಮಾಡಿ, ಅವರಿಗೆ ಮನೆ ಮತ್ತಿತರ ಅನುಕೂಲತೆಗಳನ್ನು ಮಾಡಿಕೊಟ್ಟು ಅವರು ಅಲ್ಲೇ ಇದ್ದು ಕೆಲಸ ಮಾಡುವುದಕ್ಕೆ ಜನಸೇವೆ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಇಲ್ಲ ಎಂದು ಅಲ್ಲ. ಇದಕ್ಕೆ ತಾವು ತೃಪ್ತರಾಗಬೇಕು.

ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಮಂತ್ರಿಗಳು ಈಗತಾನೇ ಏನು ಹೇಳಿದರು ಎಂದರೆ ವಿಲೇಜ್ ಅಕೌಂಟೆಂಟುಗಳಿಗೆ ೩೬೦ ರೂಪಾಯಿ ಸಂಬಳ ಕೊಡುತ್ತಾ ಇದ್ದೇವೆ ನಮ್ಮ ರಾಜ್ಯದಲ್ಲಿ ಅದಕ್ಕಿಂತಲೂ ಬಡವರಾಗಿರುವವರು ೪೦ ಪರ್ಸೆಂಟ್ ಜನ ಏನು ಇದ್ದಾರೆ ಅವರ ಕಡೆ ಗಮನ ಕೊಡ ಬೇಕು ಅಂತ ಹೇಳಿದ್ದಕ್ಕೆ ನಾನೂ ಸಪ ಓಪ್ಪುತ್ತೇನೆ. ದಯವಿಟ್ಟು ಆದಕ್ಕೂ ಇದಕ್ಕೂ ಹೋಲಿಸು ವುದಕ್ಕೆ ಹೋಗಬೇಡಿ. ಆದೇ ಒಂದು ವಾದವನ್ನು ಇದಕ್ಕೆ ತರಬೇಡಿ. ಪತಕ್ಕೆಂದರೆ ತಾವು ಆ ರೀತಿ ಹೇಳುವುದಾದರೆ ನಾನೂ ಕೂಡ ತಮಗೆ ಒಂದು ಮಾತು ಕೇಳುತ್ತೇನೆ ಅದೇನೆಂದರೆ ಸರ್ಕಾರದಲ್ಲಿ ೩ ಸಾವಿರ 3½ ಸಾವಿರ ಸಂಬಳ ತೆಗೆದುಕೊಳ್ಳುತ್ತಿದ್ದಾರಲ್ಲಾ ಅವರ ಬಗ್ಗೆ ನಾವು ಒಂದು ಪ್ರಶ್ನೆಯನ್ನು ಎತ್ತ ಬೇಕಾಗುತ್ತದೆ. ಹಳ್ಳಿಯಲ್ಲಿ ಬಡವ ಏನು ಇದ್ದಾರೆ ದಿನಕ್ಕೆ ೮ ಆಣೆಯೂ ಕೂಡ ಬರದೇ ಇರತಕ್ಕಂಥಾ ಬಡವ ಏನು ಇದ್ದಾರೆ ಅವನಿಗೆ ಸಪಾಯ ಮಾಡಬಹುದಲ್ಲಾ ಎಂದು ಹೇಳ ಬೇಕಾಗುತ್ತದೆ. ಈ ಪ್ರೊತ್ತಿನ ದಿವಸ ಸರ್ಕಾರದಲ್ಲಿ ದೊಡ್ಡ ಆಫೀಸರ್ಸ್ ೩೫೦೦ ಸಂಬಳ ತಗೆದು ಕೊಳ್ಳುತ್ತಿದ್ದಾರೆ. ಆ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲಾ. ನನ್ನ ಪ್ರಶ್ನೆ ಏನು ಎಂದರೆ ಹಳ್ಳಿಯಲ್ಲಿ ಯಾವ ಅಧಿ ಕಾರಿಯೇ ಆಗಲಿ ಕೆಲಸ ಮಾಡಿದರೆ ಅವನಿಗೆ ತಕ್ಕ ಪ್ರೋತ್ಸಾಪ ಕೊಡಬೇಕು. ಆದರೆ ನಮ್ಮ ಸರ್ಕಾರ ದವರು ಈವೊತ್ತಿನ ದಿವಸ ಅವರ ಬಗ್ಗೆ ಪಾರ್ಷಿಯಾಲಿಟಿ ತೋರಿಸುತ್ತಾ ಇದ್ದಾರೆ. ಹಳ್ಳಿಯಲ್ಲಿ ಕೆಲಸ ಮಾಡತಕ್ಕಂಥಾ ಅಧಿಕಾರಿಗೆ ಹೆಚ್ಚು ಉತ್ತೇಜನ ಕೊಡಬೇಕು. ಅವನಿಗೆ ಹೆಚ್ಚು ಸಂಬಳ ಕೊಡಬೇಕು. ಈವೊತ್ತಿನ ದಿವಸ ನಿಮಗೆ ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ ಇರಾನ್ ದೇಶದಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಡಾಕ್ಟರ್ ಕೆಲಸ ಮಾಡಿದರೆ ಪಟ್ಟಣದಲ್ಲಿ ಕೆಲಸ ಮಾಡತಕ್ಕಂಥಾ ಆ ಡಾಕ್ಟರ್‌ಗೆ ಏನು ಸಂಬಳ ಕೊಡುತ್ತಾರೋ ಅದಕ್ಕೆ ಎರಡರಷ್ಟು ಸಂಬಳವನ್ನು ಅವರು ಕೊಡುತ್ತಾರೆ. ಆದುದರಿಂದ ನಾನು ಹೇಳುವುದು ಈವೊತ್ತಿನ ದಿವಸ ಹಳ್ಳಿಯಲ್ಲಿ ಕೆಲಸ ಮಾಡತಕ್ಕಂಥಾ ಯಾವ ಅಧಿಕಾರಿಯೇ ಆಗಲಿ ವಿಲೇಜ್ ಅಕೌಂಟೆಂಟ್‌ರೇ ಆಗಲಿ, ವಿಲೇಜ್ ಲೆವಲ್ ವರ್ಕರ್ ಆಗಲಿ ಅವರಿಗೆ ಹೆಚ್ಚಿನ ಉತ್ತೇಜನ ಕೊಡಬೇಕು ಎಂದು ನಾನು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ಬಹಳ ವರ್ಷದಿಂದಲೂ ಕೆಲವರು ವಿಲೇಜ್ ಅಕೌಂಟೆಂಟ್ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಮುಪ್ಪಿನ ವಯಸ್ಸಿನಲ್ಲಿ ಅಂಥವರು ಡಿಪಾರ್ಟ್‌ಮೆಂಟಲ್ ಪರೀಕ್ಷೆ ಪಾಸು ಮಾಡಬೇಕು ಎಂದರೆ ಬಹಳ ಕಷ್ಟ. ಅದಕ್ಕೆ ನಾನು ಹೇಳುವುದು ಏನೆಂದರೆ ಯಾರಿಗೆ ವಯಸ್ಸು ೫೦ ಮೀರಿರುತ್ತದೋ ಅಂಥಾವರಿಗೆ ಸ್ಪೆಷ್ಲಲ್ ಕನ್‌ಷಿಷನ್ ಕೊಡುವುದು ಅವಶ್ಯಕ. ಯಾರು ಚಿಕ್ಕ ವಯಸ್ಸಿನವರು ಇರುತ್ತಾರೋ ೨೦-೨೫ ವರ್ಷ ಇರತಕ್ಕಂಥಾವರು ಆ ಪರೀಕ್ಷೆಯನ್ನು ಪಾಸು ಮಾಡಲಿ ಬೇಡ ಅನ್ನುವುದಿಲ್ಲ. ೫೦ ವರ್ಷ ಮೀರಿ ದವರಿಗೆ ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ ಬಗ್ಗೆ ಕನ್‌ಸೆಷನ್ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ರೂಲ್ಸ್‌ನಲ್ಲಿ ಏನು ಇದೆ ಅದರ ಪ್ರಕಾರ ಮಾಡುತ್ತಿದ್ದೇವೆ. ಲೆಕ್ಕ ಬರೆಯುವುದಕ್ಕೇನೇ ಗೊತ್ತಿಲ್ಲದೇ ಇದ್ದವರಿಗೆ ನನಗೆ ಲೆಕ್ಕ ಗೊತ್ತಿದೆ ಎಂದರೆ ನಾವು ಏನಂಥ ತೀರ್ಮಾನ ತೆಗೆಯಬೇಕಾಗುತ್ತದೆ? ಹೇಳಿ. ಆದುದರಿಂದ ರೂಲ್ಸ್ ಪ್ರಕಾರ ಅವರು ಮಾಡುತ್ತಿದ್ದಾರೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್:—ನಾನು ಈ ವಿಲೇಜ್ ಅಕೌಂಟೆಂಟರ ಬಗ್ಗೆ ಒಂದೇ ಒಂದು ಚಿಕ್ಕ ಪ್ರಶ್ನೆಯನ್ನು ಕೇಳುತ್ತೇನೆ. ಅದೇನೆಂದರೆ ಕಾನ್ಸ್‌ಟ್ಯೂಷನ್ ಪ್ರಕಾರ ಅವರು ಒಂದು ಅಸೋಷಿ ಯೇಷನ್ ಮಾಡಿಕೊಳ್ಳುವುದಕ್ಕೆ ಅವರಿಗೆ ಫಂಡಮೆಂಟಲ್ ರೈಟ್ಸ್ ಇದೆ. ಅದನ್ನೆನಾದರೂ ಪೂಟಿಕು ಮಾಡುವ ಉದ್ದೇಶ ಏನಾದರೂ ಇದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದಲ್ಲಿ ಯಾರ್ಯಾರು ಯಾವ ರೀತಿ ಅಸೋಸಿಯೇಷನ್ ಮಾಡಿ ಕೊಳ್ಳಬೇಕು ಅನ್ನುವುದಕ್ಕೆ ಒಂದು ರೂಲ್ಸ್ ಇದೆ. ಅದನ್ನು ತಾವು ಕೇಳಿ ತಿಳಿದು ಕೊಳ್ಳಬೇಕು. ಮತ್ತು ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರು ಯಾವರೀತಿ ಅಸೋಸಿಯೇಷನ್ ಮಾಡಿಕೊಳ್ಳಬೇಕು ಅನ್ನುವುದಕ್ಕೂ ಒಂದು ರೂಲ್ಸ್ ಇದೆ. [illegible]ನ್ನು ತಾವು ಓದಿ ತಿಳಿದುಕೊಳ್ಳಬೇಕು. ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸುವುದಕ್ಕೆ ಹೋಗಬೇಡಿ.

Calling Attention to a matter of Urgent Public Importance:

re: Expliotation of private Educational Institutions in Bangalore and Mysore

ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ).— ಕೊಡುಗೆ, ಶುಲ್ಕ, ಹಾಗೂ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ನೀಡದಿರುವುದು ಹಾಗೂ ಇನ್ನೂ ಮುಂತಾದವುಗಳ ಬಗ್ಗೆ ಬೆಂಗಳೂರು, ಮೈಸೂರು ನಗರಗಳಲ್ಲಿರುವ ಶಿಕ್ಷಣ ಸಂಸ್ಥೆಯವರು ಶೋಷಣೆ ಮಾಡುತ್ತಿರುವ ವಿಚಾರಗಳ ಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಮಳ್ಳೂರು ಆನಂದರಾವ್ ಮತ್ತು ಶ್ರೀಮಾನ್ ರಾಂದೇವ್ ಅವರು ಇದೇ ವಿಚಾರದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದಾರೆ. ಅವೆರಡನ್ನೂ ಸೇರಿಸಿ ನಾನು ಉತ್ತರ ಕೊಡುತ್ತೇನೆ ಎಂದು ನನ್ನ ಒಂದು ಸಲಹೆ.

ಶ್ರೀ ಮಳ್ಳೂರು ಆನಂದರಾವ್.—ನಮಗೆ ಅದರ ಕಾಪಿ ಕೊಟ್ಟರೆ ಒಳ್ಳೆಯದು. ಕಾಲಿಂಗ್ ಅಟೆನ್‌ಷನ್ ಕಾಪಿಯೊಂದನ್ನು ಕೊಡಿಸಿ.

SRI B. SUBBAIAH SHETTY.—Sir I beg to make the following statement :

There are two kinds of institutions—

(i) Recognised and Aided

(ii) Recognised but unaided.

It has come to the notice of Government that Private Educational Institutions collect donations and it is permissible under Rule 16 of Chapter 4 of the Grant-in-aid Code for Secondary Schools and there is also provision in the Grant-in-aid Code for primary schools subject to the condition that all monies so collected should be reflected in the accounts of the Institution. But in practice the receipts are passed in the name of the Societies which run the Inst tutions and the monies are taken to the accounts of the Societies, which are not subject to audit by the Department of Public Instruction. A comprehensive legislation is being considered to prevent such mal-practices. In unaided Private Educational Institutions, fees are being collected at higher rates. Government are seriously considering regulating the fee rates in Unaided Institutions through a legislation.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಕೊಟ್ಟಿರತಕ್ಕಂಥಾ ಉತ್ತರ ನೋಡಿದರೆ ಅದು ಯಾವರೀತಿಯಲ್ಲೂ ಸಹ ಪ್ರಯೋಜನವಾಗದೇ ಇರುವ ರೀತಿಯಲ್ಲಿ ಇರುವುದರಿಂದ ಅದರ ಬಗ್ಗೆ ನಾನು ವ್ಯಥೆ ಪಡಬೇಕಾಗಿದೆ. ಅವರಲ್ಲಿ ಮುಖ್ಯವಾಗಿ ಹೇಳಬೇಕಾದರೆ ಪೆಚ್ಚಿನ ಅಂಕಗಳನ್ನು ತೆಗೆದುಕೊಂಡಿರತಕ್ಕಂಥಾ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವ ಬಗ್ಗೆ ಅವರ ಉತ್ತರ